ನಂಬರ್.	ಪ್ಯೂಟೇರ್ಷ್‌ಗಳ ಹೆಸರು.	ತಾಲ್ಲೂಕು.
48	ಮಾವಿನಕೊಪ್ಪನಹಳ್ಳಿ	ನೆಲವಂಗಲ
49	ಮೈಲಾಪುರ	ತಿಪಟೂರು
50	ನೆಟ್ಟಕು ಟೆ	ಗುಬ್ಬಿ
51	ನಾಗರಭಾವಿ	ಬೆಂಗಳೂರು
52	ನೆಲ್ಲೂಲ (ಎ. ಬಿ. ಮತ್ತು ಸಿ.)	ಹೊಸಕೋಟೆ
53	ಪೀಣ್ಣ	ಬೆಂಗಳೂರು
54	ಪಂಡಿತನಹಳ್ಳಿ	ತುಮಕೂರು
55	ರಾಮಚಂದ್ರಪುರ	ಮಾಲೂರು
56	ಸಂಬಾರಗಿಡದಕಾವಲು	ದೇವನಹಳ್ಳಿ ಮತ್ತು ಚಿಕ್ಕಬಳ್ಳಾಪುರ
57	ಸೂಳಕೆರೆ	ಬೆಂಗಳೂರು
58	ತತ್ತನೂರು	ಹೊಸಕೋಟೆ
59	ತಿಂಡಲು	ಡಿಟೋ ಮತ್ತು ಮಾಲೂರು
60	ತುರುವನಹಳ್ಳಿ	ಕಡೂರು
61	ಈದ್ದೀಹೊಸಕೆರೆ	ಗುಬ್ಬಿ
62	ವಕ್ಕಲೇರಿ	ಮಾಲೂರು ಮತ್ತು ಕೋಲಾರ
63	ವಪ್ಪಹುಣಸೇ	ಕಡೂರು
64	ಯಶವಂತಪುರ (ಎ. ಮತ್ತು ಬಿ.)	ಮಾಲೂರು

ಸಿ. ಆಪ್ಪಯ್ಯ,
ಅಸಿಸ್ಟೆಂಟ್ ಕ್ವಸರ್ವೇಟರ್ ಇಚಾರ್ಜ್ ಆಫ್ ಪ್ಯೂಟೇರ್ಷ್‌ಸ್.

ಹಾಸನ ಡಿಸ್ಟ್ರಿಕ್ಟ್.

ತಾರೀಖು 20ನೇ ಜನವರಿ 1896.

ಹೊಳೇನರಸೀಪುರ ತಾಲ್ಲೂಕು ಸಬ್ ರಿಜಸ್ಟ್ರಾರ್ ಆಫೀಸಿನಲ್ಲಿ ದೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತೈವೇಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡೆಯುವದಕ್ಕೆ ಅಧಿಕಾರ ಹೊಂದಿದವರೇ ಆಗಲಿ ಈ ನೋಟೀಸು ತಾರೀಖು ಲಾಗಾಯ್ತು ಮೂರು ತಿಂಗಳೊಳಗಾಗಿ ಸಬ್ ರಿಜಸ್ಟ್ರಾರವರ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಆಕ್ಟ್ 85ನೇ ಸೆಕ್ಷನ್ ಮೇರೆ ನಾಶ ಪಡಿಸಲ್ಪಡುವದು.

ಬುಕ್ಕು.	ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಜಪ್ತಿಗೆ ಬಂದ ದಿನಾಂಕ.	ರಿಜಸ್ಟ್ರಿಗೆ ಪಾಜರಾದ ದಿನಾಂಕ.	ರಿಜಸ್ಟ್ರಿ ಆದ ದಿನಾಂಕ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
3ನೇ ನಂಬರ್ ಬುಕ್ಕು	1 / 1892—93	ಪುದ್ದೂರು ಹೊಸಹಳ್ಳಿಯಲ್ಲಿರುವ ಮಾಂತಕಟ್ಟೇ ಮಗ ವೀರಕಟ್ಟೆ	ಪುದ್ದೂರು ಹೊಸಹಳ್ಳಿಯಲ್ಲಿರುವ ವೀರಕಟ್ಟೇ ಮಗ ಮಲ್ಲಂಣ ಮಾಂತಯ್ಯ	13-10-92	13-10-92	14-10-92	ತನ್ನ ಚರಸ್ಥಿರ ಆಸ್ತಿಗಳು ತನ್ನ ಮರಣಾನಂತರ ವಿಲೇವಾರಿ ಆಗುವದಕ್ಕೆ ಹುಟ್ಟಿದ ವಿಲ್.
1ನೇ ನಂಬರ್ ಬುಕ್ಕು	525 / 1892—93	ಹೊಳೇನರಸೀಪುರದಲ್ಲಿರುವ ನೆಟ್ಟೂರು ರಾಮಣ್ಣ	ನಾಗಲಪುರದಲ್ಲಿರುವ ನವಡೇ ಚೆನ್ನನ ಮಗ ಲಕ್ಕ	22-5-93	22-5-93	23-5-93	ಎಂದುನೂರು ರೂಪಾಯಿನ ಉಧಾರ ದಸ್ತಾವೇಜು.
ಡಿಟೋ	158 / 1893—94	ಐಜನಹಳ್ಳಿಯಲ್ಲಿರುವ ಪಟೇಲ್ ವೀರೇಗವುಡ	ಐಜನಹಳ್ಳಿಯಲ್ಲಿರುವ ನಾರಣಪ್ಪ	14-11-93	14-11-93	14-11-93	ಐದು ರೂಪಾಯಿನ ಮನೆದಳದ ನಿವೇಶನ ಖರೀದಿ ದಸ್ತಾವೇಜು

ಹೆಚ್. ವಿ. ಹೊನ್ನಪ್ಪನಾಯಿಡು,
ಫೂರ್ ರಿಜಸ್ಟ್ರಾರ್.

ನೋಟಿಫಿಕೇರ್ಷ.

ತಾರೀಖು 17ನೇ ಡಿಸೆಂಬರ್ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟು ಅರಕೇಕೆರೆ ತಾಲ್ಲೂಕು ಬಾಣಾವಾರದ ಹೋಬಳಿ ಬೀಚೆರಾಯ ಚಿಕ್ಕ ಬಾಣಾವಾರ ಗ್ರಾಮದಲ್ಲಿ 146 ರೂಪಾಯಿ ಆಕಾರವುಳ್ಳ 196 ಎಕರೆ 32 ಗುಂಟೆ ಜಮೀನನ್ನು ಪೂರಾ ಆಕಾರಕ್ಕೆ ಸಾಗುವಳಿಗೆ ಹರಾಜಿಲ್ಲದೆ ಕೊಡಿಸಬೇಕು ಯಂತ ಬಾಣಾವಾರದಲ್ಲಿರುವ ಜಾವಗಲ್ಲು ವೆಂಕಟೇಶಯ್ಯ ದರಖಾಸ್ತು ಮಾಡಿದ್ದಾನೆ.

ಈ ಜಮೀನುಗಳಲ್ಲಿ 540 ದೊಡ್ಡ ಶೇಂದೀ ಮರಗಳು 543 ಈಚಲುಗುಂಬ ಸೊಸಿಗಳು 872 ಈಚಲು ಸಂಣ ಸೊಸಿಗಳು 6 ಇತರ ಜಾತಿ ಮರಗಳು ಇರುವಂತೆಯೂ ಇವುಗಳಿಗೆ ಒಟ್ಟು ರೂ. 522—6—0 ಕಿಮ್ಮತ್ತು ಆಗುವದಾಗಿ ತಿಳಿಯಬರುತ್ತೆ, ಈ ಜಮೀನುಗಳನ್ನು ಮಾಲಕಿ ಹರಾಜ್ ಇಲ್ಲದೇನೇ ತನಿಗೆ ಕೊಡಿಸಬೇಕು. ಹಾಗೆ ಕೊಟ್ಟದ್ದೇ ಆದರೆ ಜಮೀನು ಸ್ವಾಧೀನವಾದ ಲಾಗಾಯತು ಬಂದು ವರುಷದಲ್ಲಿ (10) ವಕ್ಕಲು ಇರಲು ತಕ್ಕ ಮನೆಗಳನ್ನ ಕಟ್ಟಿ ವಕ್ಕಲನ್ನು ತಂದು ಇಟ್ಟು ಗ್ರಾಮ ಆಬಾದು ಮಾಡುವದಾಗಿಯೂ, ಮೇಲ್ಕಂಡ ವಾಯಿದೆ ಒಳಗೆ ಗ್ರಾಮ ಆಬಾದು ಮಾಡಲು ಖಾತರಿ ಬಗ್ಗೆ ಮಂದನೂರು ರೂಪಾಯಿಗಳನ್ನು ಹಾಜರ್ಮಾಡುವದಾಗಿಯೂ, ವಾಯಿದೆ ಅಂದರ್‌ವಾರ್ ಗ್ರಾಮಕಟ್ಟಿ 10 ವಕ್ಕಲು ತಂದು ಇಡಲು ತಪ್ಪಿದರೆ ಡಿಪಾಜಿಟ್ ಇಡುನ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಬಹುದೆಂದು ದರಖಾಸ್ತುದಾರ ಬರ್ಯಾ ಮಾಡುತ್ತಾನೆ. ಈ ದರಖಾಸ್ತುದಾರನ ಸವಾಲಿಗಿಂತ ಸರಕಾರಕ್ಕೆ ಫಾಯಿದೆ ಮತ್ತು ಅನುಕೂಲವಾದ ಸವಾಲ್ ಮಾಡಿ ಜಮೀನ್ ಪಡಿಯಲು ಇಚ್ಛೈಯುಳ್ಳವರು ಈ ಇಸ್ತಿಹಾರ್ ಹುಟ್ಟಿದ ತಾರೀಖು ಲಾಗಾಯತು 3 ತಿಂಗಳೊಳಗೆ ಅರಸೀಕೆರೆ ತಾಲ್ಲೂಕು ಅಮಲ್ದಾರ್‌ರಲ್ಲಿ ದರಖಾಸ್ತು ಮಾಡಬಹುದು.

ಈ ಮೇರೆ ಹಾಲಿ ಬಂದಿರುವ ದರಖಾಸ್ತಿಗಿಂತ ಅನುಕೂಲವಾದ ಸವಾಲುಗಳು ಮೇಲ್ಕಂಡ 3 ತಿಂಗಳೊಳಗಾಗಿ ಬಾರದೆ ಇದ್ದರೆ ಮೈಸೂರು ಲ್ಯಾಂಡ್ ರೆವಿನ್ಯೂ ರೂಲ್ಸಿನ XXನೇ ರೂಲ್ 18ನೇ ವ್ಯಾಖ್ಯಾ ಪ್ರಕಾರ ದರಖಾಸ್ತುಗಳು ಅವುಗಳ ಯೋಗ್ಯತಾನುಸಾರವಾಗಿ ಫೈಸಲ್ಮಾಡಲ್ಪಡುವವು.

ಎ. ಕೃಷ್ಣಸ್ವಾಮಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜ್.

ಇಸ್ತಿಹಾರ್‌ನಾಮೆ.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಅಬೈರ್ ಚಡ ಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಕೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ತೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ, ಅಥವಾ ಅಂಥಾ 15ನೇ ದಿವಸ ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನ ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡದು ತಪ್ಪಿದರೆ, ತೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನ ಸರ್ಕಾರಕ್ಕೆ ದಂಡವಾಗಿ ಕೇಂಡಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಪುರು ಹರಾಜ್‌ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನೂ ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನ ಜಾರಿಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯೂಟಿ ಕಮ್ಮಿಷನರು ಅವಶ್ಯಕವಾದ ಶಿಫಾರ್ಸಿನೊಡನೆ ಗವರ್ನ್‌ಮೆಂಟಿನವರ ಅಪ್ಪಣೆ ಪಡಿಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡುಲು ತಪ್ಪಿದಂಥಾ ಪುರು ಹರಾಜ್‌ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜು ಡೆಪ್ಯೂಟಿ ಕಮ್ಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜು ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರ್ರೇ ಮಂಜೂರ್ ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ, ಅಥವಾ ಮತ್ತೊಬ್ಬರ ಪುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವದೋ ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜು ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದನಂತರ ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳತಕ್ಕಬಗ್ಗೆ ಸಾಗುವಳಿ ಚೀಟಿಯಾನೆ ಬರಹ ಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅರ್ಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್‌ದಾರನು ಅಮಲ್ದಾರ್‌ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್ದಾರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೋಡ್ XIIIನೇ ಪ್ರಕರಣ ಪ್ರಕಾರ ಅಪ್ಪೀಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷೇ ಮೇಲೆ ಷರತ್ ಬರದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಸ್ವತ್ತಿನ ವಿವರ. ಜಮ್ರ್ಮಾ. ಸರ್ವೇ ನಂಬರು.	ಖುಷ್ಕಿ, ಖುಷ್ಕಿ ತರೀ ಬಾಗಾಯತು ಪಡ್ತಾವಾ ಕಾಪಿ.	ವಿಸ್ತೀರ್ಣ.	ಉತ್ತಾರ.	ಮರಗಳು ಭೂವಿಗಳು ಮತ್ತೈರ. ಕೂಡಿದ ಪಟ್ಟಿಗೂ ಕರಾರ್ನಾಮಾ ಪತ್ರದಲ್ಲಿ.	ಹರಾಜು ಸ್ವತ್ತು, ತಾರೀಖು ಮತ್ತು ಕಾಲ	ಹರಾಜು ನಡಿಸಕ್ಕಾರನ ವರ ಹೆಸರು.	ಸ್ವತ್ತಾಗಿದ್ದರೆ ಸರ್ಕಾರದ ಸಮಾನ್ಯ ಸೊಬಲಗು ಮತ್ತು ಇತರ ಹರಾ.
1		3	4	5	6	7	8	9	10	11
ಚನ್ನರಾಯಪಟ್ಟಣ.	ಕಸಬಾ.	ಬಿಸಲಹಳ್ಳಿ.	51	ತರೀ	1—24			ಜಮೀನು ಬಿ. ದಿ ಪಂಟಿ ಹನ್ನೊಂದಕ್ಕೆ ಪುರು, ತಾರೀಖು 5—2—96.	ಅನುದಾರರು ಯಾ ಕಿರಸ್ತೀದಾರು.	ಹರಾಜಿನಲ್ಲಿ ಪಟ್ಟಿಯವರು ಸರ್ವೇ ಛಾಪಿಯಿಂದ ನೋಕರರಾಗಿನವ ಧರಪತ್ರಿ ಕಾಯಾಯಿನ್ನಿ, ಅದುವರಿಗು ಹಂಗಾ ಧರಪತ್ರಿ ಕಾಯಾಯಿನ್ನಿ ಬಂದು ಬಾಗವಸಲು ನುತ್ತು ಕ್ಷಲ್ಲಗಳ ಕಟ್ಟು ಸಹ ಕೊಡಬೇಕು. 1896—97ನೇ ಇಸವಿ ಬಾಗಾಯತು ಪಡ್ತಾ ಕಂದಾಯ. ಸಗಲ್ ನೋಡಿ.
			5	ಡಿಟೋ	2— 1					
			ಡಿ 6	ಡಿಟೋ	2—23					
			9	ಡಿಟೋ	2—21					
			10	ಡಿಟೋ	1— 1					
			11	ಡಿಟೋ	0— 5					
			34							
			1	ಡಿಟೋ	1—16					
			46							
			1	ಡಿಟೋ	0— 4					
			47							
			4	ಡಿಟೋ	1— 4					
			51							
			4	ಡಿಟೋ	0— 5					
			52							
			2	ಖುಷ್ಕಿ	0—30					
			57							
			257	ತರೀ	1—37					
			1							
			257	ಡಿಟೋ	2—33½					
			2							
					18—4					

ಜೆ. ಡಬ್ಬಿಯು. ಸೈಟ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ನೋಟಿಫಿಕೇಷನ್.

ತಾರೀಖು 21ನೇ ಡಿಸೆಂಬರ್ 1895.

1878ನೇ ಇಸವಿ ಫಾರೆಸ್ಟ್ ರೂಲ್ಸ್ 11ನೇ ಕಲಂ ಅನುಸರಿಸಿ, ಇದರಡಿ ನಮೂದಾಗುವ ಸರ್ಕಾರೀ ಜಂಗಲ್‌ಗಳು, ಪ್ಲಾಂಟೇಷನ್‌ಗಳು ಮತ್ತು ಸಂದಲ್ ರಿಜರ್ವ್‌ಗಳು ಸಹ ಬಿಸಲು ಕಾಲಕ್ಕಾಗಿ 1896ನೇ ಇಸವಿ ಫಿಬ್ರವರಿ ಗುರ್ರೇ ಲಾಗಾಯತು ಮೇ ಆಖೈರ್ ವರಿಗೆ ಬ್ಲಂದ್ ಮಾಡಲ್ಪಡುವವು. ಬೇಟೆಗಾರರೂ ಮತ್ತು ಇತರ ಜನಗಳೂ ಅಪ್ಪಣೆ ಇಲ್ಲದೆ ಮೇಲ್ಕಂಡ ಫಾರೆಸ್ಟ್ ಪ್ಲಾಂಟೇಷನ್ ಮತ್ತು ಸಂದಲ್ ರಿಜರ್ವ್‌ಗಳಲ್ಲಿ ಪ್ರವೇಶ ಮಾಡಿದರೆ ಪ್ರಾಸಿಕ್ಯೂಷನಿಗೆ ಗುರಿಯಾಗುವರು.